

# ಮಿಡತೆ 733



ನಮ್ಮಲ್ಲಿನ ಹಸಿರು ಬಣ್ಣದ ಸಾಮಾನ್ಯ ಮಿಡತೆ

★ ಚಿತ್ರ- ಬರಹ: ಕಿರಣ್ ವಟಿ

ಕೀಟಲೋಕದ ಜೈವಿಕ ಸಾಂದ್ರತೆಯಲ್ಲಿ ಚಿಟ್ಟೆಗಳಷ್ಟೇ ಮಿಡತೆಗಳೂ ದಟ್ಟ ಸಾಂದ್ರತೆಯಲ್ಲಿರುತ್ತವೆ. ಚಿಟ್ಟೆಗಳಂತೆ ಇವು ಸರ್ವಾಂತರ್ಯಾಮಿಯೂ ಹೌದು. ಆದರೆ ಅವುಗಳ ಆಕರ್ಷಕವಲ್ಲದ ದೇಹ ಸೌಂದರ್ಯದಿಂದಾಗಿ ಚಿಟ್ಟೆಯಷ್ಟು ಗಮನ ಸೆಳೆಯುವುದಿಲ್ಲ. ಚಿಟ್ಟೆಯಾದರೋ ಸಹಸ್ರಾರು ಬಣ್ಣ, ಆಕಾರ, ದೇಹದ ಮಚ್ಚೆ, ಹಾರಾಟದ ಸೊಗಸು– ಇತ್ಯಾದಿ ಕಾರಣಗಳಿಂದ ಸದಾ ಜನಪ್ರಿಯ. ಹಸಿರು ಹುಲ್ಲಿನ ಎಸಳಿನಂತೆಯೋ, ಒಣ ಮರದ ತುಂಡಿನಂತೆಯೋ ಕಾಣಿಸುವ, ಅಷ್ಟೇನೂ ಸೊಗಸುಗಾರನಲ್ಲದ ಮಿಡತೆಗಳು ಚಲನವಲನ ಇಲ್ಲದೆ, ಹುಲ್ಲಿನ ಮರೆಯಲ್ಲೋ ತಾವು ಇಷ್ಟಪಡುವ ಎಲೆಗಳ ಅಡಿಯಲ್ಲೊ ತಮ್ಮಪಾಡಿಗೆ ತಾವಿರುತ್ತವೆ. ಅದು ಅವುಗಳ ಜೀವರಕ್ಷಣಾತಂತ್ರವೂ ಇರಬಹುದು.

ಪ್ರಕೃತಿಯನ್ನು ಅತ್ಯುತ್ತಮ ವರ್ಣ ಕಲಾವಿದ ಎಂದು ಬಣ್ಣಿಸಲಾಗುತ್ತದೆ.

8ನೇ ಪುಟ ನೋಡಿ